
# ವಂದೇ ಗುರು ಪರಂಪರಾಮ್




**ಕೃತಿ:** ವಂದೇ ಗುರು ಪರಂಪರಾಮ್
**ಲೇಖಕರು :** ಡಾ.ಗುರುರಾಜ ಪೋಶೆಟ್ಟಿಹಳ್ಳಿ
**ಪ್ರಕಾಶನ :** ಪ್ರಕಾಶಕರು : ಪ್ರಣವ ಮೀಡಿಯಾ ಹೌಸ್ ಪ್ರಕಾಶನ , ಬೆಂಗಳೂರು - 560 085
**ಪುಟ:** 4+184 **ಬೆಲೆ :** 180
**ಪ್ರತಿಗಳಿಗೆ :** ಫೋ. 9739369621

**ಡಾ.**ಗುರುರಾಜ ಪೋಶೆಟ್ಟಿಹಳ್ಳಿಯವರ ಸಾಹಿತ್ಯಕೃಷಿ ಬಹುಮುಖವಾದದ್ದು; ವೇದಾಗಮಗಳ ಆಂತರ್ಯವನ್ನು ಅರಿಯುವ ಹಂಬಲವನ್ನು ತನ್ನ ಬರಹಗಳ ಮೂಲಕ ಅಭಿವ್ಯಕ್ತಿಸುತ್ತಾರೆ ; ಉತ್ತಮ ಸಮಾಜದ ವ್ಯಷ್ಟಿ-ಸಮಷ್ಟಿ ನೀತಿಯನ್ನು ಬಯಸುತ್ತಾರೆ. ಹಾಗೆಯೇ ಅವರ 'ಗುರುತತ್ತ್ವ' 'ವಂದೇ ಗುರುಪರಂಪರಾಮ್' ಲೇಖನಗಳ ಸಂಕಲನ ಮಾತ್ರವಲ್ಲ ಒಂದೊಂದು ಸ್ವತಂತ್ರ ಆಲೋಚನೆಯುಳ್ಳದ್ದಾದಂತೆಯೇ ತಮ್ಮ ಒಟ್ಟಾರೆ ಧ್ಯೇಯವಾದ ಗುರು ಎಂಬುವ ಕಾಳಾದ ಬೆಳಗಿನ ಕಡೆಗೆ ಶೀಲಿಸುತ್ತದೆ. ಇದು ಈ ಸಂಕಲನ ನೀಡುವ ಚಿರಂತನ ಚಿಂತನ.

'ಗುರುಪರಂಪರಾಮ್' ಹೊತ್ತಿಗೆಯ ೧೭೨ನೇ ಪುಟದ 'ಮಧುಕರ ವೃತ್ತಿ ಎನ್ನದು' (ಅದು ಬಲು ಚೆನ್ನದು) ಗುರುರಾಜರ ಇಡೀ ಚಿಂತನವನ್ನು ಬಿಂಬಿಸುತ್ತದೆ. ಆ ಮಧು (ಜೇನು) –ಗುರುರಾಜ ಪೋಶೆಟ್ಟಿಹಳ್ಳಿ ಎಂಬ ಮಧುಕರ ಅನೇಕ ಸಂಪನ್ಮೂಲಗಳನ್ನು ಅಭ್ಯಸಿಸಿ, ಅರಗಿಸಿಕೊಂಡ ಬಿಂಬ - ಮನಸ್ಸಿಗೆ ತಿಳಿಯಾದ ಸಂತಸ ವೀಯುತ್ತದೆ. (ಈ ದಿಸೆಯಲ್ಲಿ ಪೂಜ್ಯ ಜಿ.ಪಿ. ರಾಜರತ್ನಂ ಅವರ 'ವಿಚಾರರಶ್ಮಿ'ಯ ಕೆಲವು ಚಿಂತನ ನೆನಪಾಗುತ್ತದೆ). ಅದೇ ಗುರುತೇಜ ಅರಸುವ ಪಥದಲ್ಲಿ ಗುರುರಾಜ ಪೋಶೆಟ್ಟಿಹಳ್ಳಿಯವರು ಮುನ್ನಡೆಯುತ್ತಿದ್ದಾರೆ.

ಗುರುತತ್ತ್ವವೆನ್ನುವ ಪರಿಕಲ್ಪನೆಯೇ ಬಹು ದೊಡ್ಡದು. ಮಹತ್ತು, ಬೃಹತ್ತು, ಹಿರಿಮೆ, ಗರಿಮೆ, ವೈವಿಧ್ಯ, ವೈಶಿಷ್ಟ್ಯ, ವೈಚಿತ್ರ್ಯ-ವೈಲಕ್ಷಣವುಳ್ಳದ್ದು (ವಿಶೇಷ ಲಕ್ಷಣ ಎಂಬರ್ಥದಲ್ಲಿ) ತಾಯಿ ಮೊದಲ ಗುರುವಾದರೆ, ತಂದೆ-ಮುನ್ನಡೆಸುವಂತೆ, ಆಚಾರ್ಯ ತನ್ನ ನಡೆ-ನುಡಿ ಒಂದೇ ಆಗಿಸಿಕೊಂಡು ಗುರುವಾಗಿ ಕ್ಷಣಕ್ಷಣದಲ್ಲೂ ಅಜ್ಞಾನದ ತಮ ಕಳೆಯುತ್ತ ಕಾಳಾದ ನಿರ್ಮಲ ನಿಚ್ಚಳವಾದ ಜ್ಞಾನದ ಬೆಳಕಿನ ಹಾದಿಯೆಡೆಗೆ ಶಿಷ್ಯನನ್ನು ಕೈಹಿಡಿದು ಒಯ್ಯುತ್ತ ಬದುಕನ್ನು ಅರ್ಥವತ್ತಾಗಿಸುತ್ತಾನೆ.

'ಮೇಧಾದಕ್ಷಿಣಾಮೂರ್ತಿ' ಹೀಗೆ, ತಪೋಪ್ರಧಾನ , ಜ್ಞಾನ ಪ್ರಧಾನ, ಅರ್ಥಯುತ ವೈರಾಗ್ಯ ಪ್ರಧಾನ ಮಟಮಟಿಸುವ ಮಂತ್ರವಲ್ಲ ಗುರು ತಿಳಿಯಹೇಳುವುದು. ಸ್ಫಟಿಕ ಶಲಾಕೆಯಂಥ ನಿರ್ಮಲ ತೇಜದ ವಾಕ್. ಗುರುರಾಜರು ಈ ಎಲ್ಲ ಚಿಂತನ ಇಂದ್ರಚಾಪವನ್ನು ಓದುಗರ ಮನದಲ್ಲಿ ಮೂಡಿಸುತ್ತಾರೆ ; 'ವಂದೇ ಗುರುಪರಂಪರಾಮ್' ಎಂದೇ ಓದಿಸಿಕೊಂಡು ಪುಟ ಪುಟವುಳ್ಳ ತಿರುಳಿರುವ ಬರಹವನ್ನೇ ತುಂಬಿಕೊಂಡಿದೆ ; ಹಾಗೂ ಈ ತಿರುಳು ಆರದ ಮಧು ಎಂದರೆ ಉತ್ಪ್ರೇಕ್ಷೆಯಾಗದು.

ಇಡೀ ಗ್ರಂಥವನ್ನು ಮತ್ತೆ ಮತ್ತೆ ಓದುವ ಅಭ್ಯಸಿಸುವ ಹಾಗೂ ಅಲ್ಲಿರುವ ಅಪೂರ್ವ ಚಿಂತನೆ ಕ್ಷಣಗಳನ್ನು ಅಧ್ಯಯನಗೈಯುವ ಸಾರ ಉಳಿಸಿಕೊಂಡಿದೆ. ಇಡೀ ಗ್ರಂಥ ಅದೆಷ್ಟೋ ಬಾರಿ ಓದಿದರೂ Repetition ಆಗದೆ recapitulation ಮಾಡಿಸುತ್ತದೆ. 'ಗುರು' ಖಗೋಳ ವಿಜ್ಞಾನದ ಪ್ರಕಾರ ಎಷ್ಟು ಬೃಹತ್ತಾದವನೋ, ಮನೋವಿಜ್ಞಾನದ ಪ್ರಕಾರವೂ ಅಷ್ಟೇ ಅರಿವಿನ ರೋಹಿತ; ಮತ್ತೆ ಆ ರೋಹಿತ ಒಂದಾದಾಗ ಬರೀ ಬೆಳಕೇ ಕಾಣುವಂಥದು. ಅದೇ ಇಂದು ಅತ್ಯಗತ್ಯ ಕೂಡ. ಮೌಲ್ಯಯುತ ಲೇಖನ ಮಾಲೆ ಈ ಗ್ರಂಥದ ಹೆಚ್ಚಳ. ಎಷ್ಟು ಬರೆದರೂ ಕಡಿಮೆಯೇ. ಅದೆಷ್ಟೋ ಆಕರಗಳನ್ನು ಗುರುರಾಜ ಪೋಶೆಟ್ಟಿಹಳ್ಳಿಯವರು ತಿಳಿದು, ಅರಗಿಸಿಕೊಂಡು, ಬರಹದ ಅಭಿವ್ಯಕ್ತಿ ನೀಡಿರುವಂಥದು. ಇದರಿಂದಾಗಿ ಇಡೀ ಗ್ರಂಥ ಸದಾ ಅಧ್ಯಯನಶೀಲವಾದದ್ದು. ಇಂಥ ಅಮೂಲ್ಯ ಬರಹಗಳನ್ನು ಹೆಸರಿಗೆ ತಕ್ಕಂತೆ ಡಾ. ಗುರುರಾಜರು ಅನೇಕ ಉಕ್ತಿಸೂಕ್ತಿ ಸಮಗ್ರತೆಯಿಂದ ನೇಯ್ದಿರುವ ಈ ಗುರು ಗ್ರಂಥ ವಾಗ್ದೇವಿಗೆ ಗ್ರೈವೇಯಕವೇ (ಕಂಠೀಹಾರ) ಆಗುತ್ತದೆ. ಗುರುತತ್ತ್ವವೇ ಅಂಥದು. ಅದು ಶಂಕರ-ರಾಮಾನುಜರ-ಆನಂದತೀರ್ಥರ, ಹಾಗೆಯೇ ಪೂಜ್ಯ ಆಚಾರ್ಯ ಪುರುಷರಾದ ದೇಶಿಕರ, ವಾದಿರಾಜತೀರ್ಥರ, ಮಂತ್ರಾಲಯಪ್ರಭುಗಳ, ಶೃಂಗೇರಿಯ ತಪೋನಿಧಿಗಳ — ಹೀಗೆ ಎಲ್ಲ ಎಲ್ಲರ ಅರಿವಿನ ಮೌಕ್ತಿಕ ಸಂಕುಲ ಈ ಗ್ರಂಥ. ೧೭೩ ಪುಟದುದ್ದಕ್ಕೂ ಯಾವ ಅಕ್ಷರವು-ಅಕ್ಷರವೇ; ಅದೇ ಅಕ್ಷತೆ. ಅಲ್ಲಿ ಕ್ಷರ ಇಲ್ಲ, ಕ್ಷತವೂ ಇಲ್ಲ.

*— ಡಾ. ಎನ್.ಕೆ. ರಾಮಶೇಷನ್, ಮೈಸೂರು*